ಆ) ಇಲ್ಲ

ಇ) ಹೌದು, ಸರ್ಕಾರವು ದಿ 10 12 2003 ರಿಂದ ಜಾರಿಗೆ ಬರುವಂತೆ ಬೆಟ್ಟಿಂಗ್ (ಲಾಟರಿ) ತೆರಿಗೆಯನ್ನು ವಿಧಿಸಲು ಸುಗ್ರಿವಾಜ್ಞೆಯನ್ನು ಹೊರಡಿಸಿದೆ ಇದರಿಂದ ಕರ್ನಾಟಕ ರಾಜ್ಯದಲ್ಲಿ ಮಾರಾಟವಾಗುವ ಯಾವುದೇ ಲಾಟರಿಯ ಪ್ರತಿ ಬಂಪರ್ ಡ್ರಾಗಳಿಗೆ ರೂ 15 ಲಕ್ಷ ಹಾಗೂ ಬೇರೆ ಡ್ರಾಗಳ ಮೇಲೆ ರೂ 1 ಲಕ್ಷ ತೆರಿಗೆಯನ್ನು ವಿಧಿಸಿದೆ

ಈ) ಕರ್ನಾಟಕ ರಾಜ್ಯದ ಸಾಂಪ್ರದಾಯಿಕ ಲಾಟರಿಗಳನ್ನು ಮೆ ಎಂ ಎಸ್ ಐ ಎಲ್ ಸಂಸ್ಥೆ ಮೂಲಕ ಹಾಗೂ ಕಂಪ್ಯೂಟರೈಸ್ಡ್ ನೆಟ್‌ವರ್ಕ್ ಲಾಟರಿಯನ್ನು ಮೆ ಆಲ್ಟಾ ಎಂಟರ್‌ಟೈಮೆಂಟ್ ಸಲ್ಯೂಷನ್ ಸಂಸ್ಥೆ ಪರವಾಗಿ ನಡೆಸಲಾಗುತ್ತದೆ

ರಾಜ್ಯದಲ್ಲಿ ಸೆಕೆಂಡ್ಸ್ ಮದ್ಯ ವ್ಯವಹಾರದ ಪ್ರಕರಣಗಳ ಬಗ್ಗೆ

36 (12) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮದ್ಯದ ಸೆಕೆಂಡ್ಸ್ ವ್ಯವಹಾರ ಇದೆಯೇ

ಆ) ಇದ್ದಲ್ಲಿ, ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ

ಇ) ಇಲ್ಲವಾದಲ್ಲಿ, ಪಾನೀಯ ನಿಗಮದ ಮುಖೇನ ಸರಬರಾಜು ಮಾಡದಿರುವ ಮದ್ಯಗಳೆಲ್ಲವೂ ನಕಲಿ ಮದ್ಯ ಅಲ್ಲವೇ

ಅಂತಹ ಮದ್ಯ ಯಾವುದೇ ಬಾರ್ ಅಥವಾ ಅಂಗಡಿಗಳಲ್ಲಿ ಮಾರಾಟ ಮಾಡಿದ್ದಲ್ಲಿ ಆ ಅಂಗಡಿ ಅಥವಾ ಬಾರ್‌ನ ಪರವಾನಿಗೆಯನ್ನು ರದ್ದು ಮಾಡಲಾಗುವುದೇ?

ಶ್ರೀ ಎಂ ಎಂ ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ) ಹೌದು

ಅ) ಒಟ್ಟು 1918 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ 297140 ಬಲ್ಕ್ ಲೀಟರ್‌ಗಳ ತೆರಿಗೆ ರಹಿತ ಮತ್ತು ನಕಲಿ ಮದ್ಯವನ್ನು ಜಪ್ತು ಮಾಡಲಾಗಿದೆ ಮತ್ತು 3655 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ

ಇ) ಹೌದು

ಈ ಬಗ್ಗೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ

ರಾಜ್ಯದಲ್ಲಿ ಮದ್ಯದಂಗಡಿ ಮತ್ತು ಬಾರ್ ನಡೆಸಲು ಇರಬೇಕಾದ ಮಾರ್ಗಸೂಚಿಗಳ ಬಗ್ಗೆ

37 (13) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮದ್ಯದಂಗಡಿಗಳು ಹಾಗೂ ಬಾರ್‌ಗಳ ಸಂಖ್ಯೆ ಎಷ್ಟು

ಆ) ಇವುಗಳಿಗೆ ಪರವಾನಿಗೆಯನ್ನು ನೀಡಲು ಬಳಸುವ ಮಾರ್ಗಸೂಚಿಗಳೇನು

ಇ) ಪ್ರತಿ ಮದ್ಯದಂಗಡಿ ಅಥವಾ ಬಾರ್ ನಡುವೆ ಇರಬೇಕಾದ ಅಂತರವೆಷ್ಟು

ಈ) ಎಷ್ಟು ಪ್ರಕರಣಗಳಲ್ಲಿ ಅಂತರ ನಿಯಮ ಉಲ್ಲಂಘಿಸಿ ಪರವಾನಿಗೆಯನ್ನು ನೀಡಲಾಗಿದೆ ಅಥವಾ ಇಲಾಖೆಯ ಗಮನಕ್ಕೆ ಬಾರದೇ ಇವುಗಳನ್ನು ನಡೆಸಲಾಗುತ್ತಿದೆಯೇ ಜಿಲ್ಲಾವಾರು ಕ್ಷೇತ್ರವಾರು ಪರವಾನಿಗೆದಾರರ ವಿವರ ನೀಡುವುದು?